ವಿಕಲಚೇತನ ಕಲಾವಿದರಿಗೆ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಮಂಜೂರು ಮಾಡಲಾಗುತ್ತಿದೆ. ಪ್ರಸ್ತುತ ಮಾಹೆಯಾನ ₹ 1000/– ದಂತೆ ಮಾಸಾಶನ ನೀಡಲಾಗುತ್ತಿದೆ.

ಆ) ವೈದ್ಯಕೀಯ ಸೇವೆಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಮಾಸಾಶನ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂಲಭೂತ ಸೌಕರ್ಯ

1428(415), ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಿರೇಕೆರೂರು ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರತಿಭಟನೆ ಸಂದರ್ಭದಲ್ಲಿ ಕಂಡುಬಂದ ಸಮಸ್ಯೆಗಳು ಯಾವುವು;

ಇ) ಅವುಗಳನ್ನು ಪರಿಹಾರ ಮಾಡಲು ಸರಕಾರ ಹಾಕಿಕೊಂಡ ಕ್ರಮಗಳೇನು?

ಶ್ರೀ ಆರ್.ವಿ.ದೇಶಪಾಂಡೆ(ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಬಂದಿದೆ.

ಆ) ಸಮಸ್ಯೆಗಳ ಪಟ್ಟಿ ಅನುಬಂಧದಲ್ಲಿ ಲಗತ್ತಿಸಿದೆ.

ಇ) ದಿನಾಂಕ:05.02.2014 ರಂದು ಸ್ಥಳೀಯ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೊಂದಿಗೆ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜಿಗೆ ಖುದ್ದು ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆ ಹಾಗೂ ಬೇಡಿಕೆಗಳ ಬಗ್ಗೆ ಚರ್ಚಿಸಿ ಕಾಲೇಜಿನಲ್ಲಿ ಲಭ್ಯವಿರುವ ಕಾಲೇಜು ಅಭಿವೃದ್ಧಿ ನಿಧಿ ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ನಿಧಿಯಿಂದ ವಿದ್ಯಾರ್ಥಿಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ತೀರ್ಮಾನಿಸಲಾಗಿದೆ.

ಅದರಂತೆ ವಿದ್ಯಾರ್ಥಿಗಳ ಬಹುತೇಕ ಬೇಡಿಕೆಗಳನ್ನು ಈಡೇರಿಸಲಾಗಿರುತ್ತದೆ. ಸದರಿ ಕಾಲೇಜಿಗೆ ಪ್ರಾಂಶುಪಾಲರನ್ನು ನಿಯೋಜಿಸಲಾಗಿರುತ್ತದೆ. ಖಾಲಿ ಇರುವ ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಅಲ್ಲಿಯವರೆಗೆ ವಿದ್ಯಾರ್ಥಿಗಳ ಕಲಿಕಾ ದೃಷ್ಟಿಯಿಂದ ಅತಿಥಿ ಉಪನ್ಯಾಸಕರನ್ನು ಒದಗಿಸಲಾಗಿದೆ. ಕಟ್ಟಡದ ದುರಸ್ತಿ, ಮುಂತಾದ ಬೇಡಿಕೆಗಳ ಬಗ್ಗೆ ಅನುದಾನದ ಲಭ್ಯತೆ ಆಧಾರ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಿರೇಕೆರೂರು–584111.

ಸ್ಥಳೀಯ ಶಾಸಕರಾದ ಶ್ರೀ ಯು.ಬಿ.ಬಣಕಾರ್, ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ ಧಾರವಾಡ ಇವರು ದಿನಾಂಕ:05.02.2014ರಂದು ಮಧ್ಯಾಹ್ನ 12–30ರ ಸುಮಾರಿಗೆ ಕಾಲೇಜಿನ ಮುಷ್ಕರ ನಿರತ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಸಂದರ್ಶಿಸಿ/ಸಭೆ ನಡೆಸಿ ಈ ಕೆಳಕಂಡ ಸಮಸ್ಯೆಗಳ ಪಟ್ಟಿಯನ್ನು ಪಡೆಯಲಾಯಿತು.

1. ಪ್ರಾಂಶುಪಾಲರ ಬದಲಾವಣೆ
2. ಶೌಚಾಲಯ ಮತ್ತು ಸ್ವಚ್ಛತೆ ವ್ಯವಸ್ಥೆ
3. ಆಟದ ಮೈದಾನ
4. ಭೌತಶಾಸ್ತ್ರ ವಿಭಾಗ ಹಾಗೂ ಕಾಲೇಜಿನ ವಿದ್ಯುತ್ ಸಂಪರ್ಕದ ಸಮಸ್ಯೆ
5. ತರಗತಿ ಕಪ್ಪು ಹಲಗೆ ಬದಲಾವಣೆ
6. ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ
7. ಪ್ರಥಮ ಚಿಕಿತ್ಸೆ
8. ನೀರಿನ ಶುದ್ಧೀಕರಣ
9. ಕಂಪ್ಯೂಟರ್ ದುರಸ್ಥ ಮತ್ತು ಅಂತರ–ಜಾಲ ವ್ಯವಸ್ಥೆ
10. ಕಾಲೇಜಿನ ಹಾಗೂ ಕೊಠಡಿಗಳ ನಾಮ ಫಲಕ
11. ಸಭೆ ಸಮಾರಂಭಗಳಿಗೆ ಧ್ವನಿ–ವರ್ಧಕ
12. ಎಲ್ಲಾ ವಿಧವಾದ ವಿದ್ಯಾರ್ಥಿ ವೇತನ
13. ಸ್ನಾತಕೋತ್ತರ ಪದವಿ ಪ್ರಾರಂಭದ ಸಂಬಂಧ ಕ್ರಮ
14. ಕಾಲೇಜಿನ ದುರಸ್ಥಿ(ಸರ್ಕಾರ)
15. ಆಂತರಿಕ ಅಂಕಗಳ ನಮೂದುಗಳು
16. ಉಪನ್ಯಾಸಕರುಗಳ ಕೊರತೆ (ಸರ್ಕಾರ)
17. ಗ್ರಂಥಾಲಯದ ಅನುದಾನ ಕೋರಿ

18. ಪ್ರಾಂಶುಪಾಲರ ನಡವಳಿಕೆ

19. ಅತಿಥಿ ಉಪನ್ಯಾಸಕರ ಕರ್ತವ್ಯದ ಬಗ್ಗೆ

20. ಹಣಕಾಸಿನ ತಪಾಸಣೆ

ಈ ಮೇಲ್ಕಂಡ ವಿದ್ಯಾರ್ಥಿ/ವಿದ್ಯಾರ್ಥಿಯ ಬೇಡಿಕೆಗೆ ಅನುಗುಣವಾಗಿ ನಡಾವಳಿಯಲ್ಲಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಕೆ.ಆರ್.ಪುರ ಸರ್ಕಾರಿ ಕಾಲೇಜಿನ ಕಾಮಗಾರಿಗಳು

1430(2557), ಶ್ರೀ ಬಸವರಾಜ್ ಬಿ.ಎ.(ಕೆ.ಆರ್.ಪುರಂ)

ಅ) ಕೆ.ಆರ್.ಪುರದಲ್ಲಿರುವ ಸರ್ಕಾರಿ ಪದವಿ ಕಾಲೇಜಿನಲ್ಲಿ ತರಗತಿಗಳನ್ನು ನಡೆಸಲು ಕೊಠಡಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹೆಚ್ಚುವರಿ ಕೊಠಡಿಗಳು, ಶೌಚಾಲಯ ಹಾಗೂ ಆಡಿಟೋರಿಯಂ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಈ ಕಾಲೇಜಿಗೆ ₹ 50.00 ಲಕ್ಷ ವೆಚ್ಚದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಿದ್ದು, ಇಲಾಖೆಗೆ ಹಸ್ತಾಂತರಿಸಲಾಗಿದೆ. ₹ 10.00 ಲಕ್ಷ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಲು ಅನುಮತಿಯನ್ನು ನೀಡಲಾಗಿದ್ದು, ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ₹ 70.00 ಲಕ್ಷ ವೆಚ್ಚದಲ್ಲಿ ಸ್ನಾತಕೋತ್ತರ